ಮೋಹಿತ್ ವಾಪಾಸು ಓಡು ನಡಿಗೆ ಹಾಕಿದ. ಅದೇ ನಾವು ಅವನನ್ನು ಕಡೆಯದಾಗಿ ಕಂಡಿದ್ದು."

"ವರ್ಷಿಣಿ ಯಾಕೆ ಏಕಾಏಕಿ ಅದನ್ನ ವಿಚಾರಿಸಿದಳು? ಆಗ ನಿಮ್ಮ ಮಿತ್ರನ ಪ್ರತಿಕ್ರಿಯೆ ಏನಿತ್ತು?"

"ಹೂಂ. ಆತ ಹೇಳ್ದ, 'ನಾನು ಯಾವತ್ತೂ ಪರ್ಸು ಮರೆಯೋನಲ್ಲ. ಇವತ್ತು ಯಾಕೆ ಹೀಗಾಯ್ತು?' ಆದರೆ ಆತನ ಮೊಗದಲ್ಲಿ ವಿಚಿತ್ರವಾದ ಭೀತಿಯನ್ನು ನಾನು ಕಂಡೆ..."

"ಭೀತಿ! ಆಕೆ ಹಾಗೆ ಕೇಳ್ದಾಗ ಅವ್ನಿಗೆ ಹೆದರಿಕೆ ಆಯ್ತೆ? ಅಥವಾ ಇನ್ನೇನಾದ್ರೂ ಘಟನೆ ಇದೆಯೆ?"

"ಹೂಂ. ಅದಕ್ಕೆ ಕ್ಷಣಗಳ ಮುನ್ನ ಅವ್ನಿಗೆ ಒಂದು ಫೋನು ಬಂದಿತ್ತು. ಅದನ್ನು ಉತ್ತರಿಸಿದೊಡನೆ ಆತನ ಮೊಗದ ಚಹರೆ ಬದಲಾಗಿದ್ದನ್ನು ಗಮನಿಸ್ದೆ. ಒಮ್ಮೆಗೇ ಆತ ಬಿಳಿಚಿಕೊಂಡಿದ್ದ."

"ಹೌದೆ? ಆಶ್ಚರ್ಯಕರ! ಸರಿ, ವರ್ಷಿಣಿ ಹಾಗೆ ಯಾಕೆ ವಿಚಾರಿಸಿದ್ಲು ಅನ್ನೋ ಬಗ್ಗೆ ಏನಾದ್ರೂ ಹೇಳಿದ್ಳಾ?"

"ಹೂಂ. ಅವ್ರು ಏನಾದ್ರೂ ಮರೆತಾಗ ಅವ್ರ ಮುಖ ನೋಡ್ದಾಗಲೇ ನನ್ಗೆ ಗೊತ್ತಾಗುತ್ತೆ. ನೀರಿನಲ್ಲಿ ಬಿದ್ದೋರ ತರ ಮಾಡ್ತಾರೆ ಅಂತ ಹೇಳಿದಳು."

"ಓಹ್! ನೀವು ಮನೆಯಿಂದ ಹೊರಟು ಎಷ್ಟು ಹೊತ್ತಾಗಿತ್ತು ಆವಾಗ?"

"ಸುಮಾರು ಕಾಲು ಗಂಟೆಯಷ್ಟೆ. ವರ್ಷಿಣಿ ಮೆಲ್ಲನೆ ಮುಂದೆ ಹೋಗುವ ಎಂದಳು. ನಾವು ನಿಧಾನವಾಗಿ ತುಸು ದೂರ ಸಾಗಿದೆವು. ಮೋಹಿತ ಬರುವ ಲಕ್ಷಣ ಕಾಣಲಿಲ್ಲ. ಆಮೇಲೆ ನಾವು ಮರದ ಬೊಡ್ಡೆಯೊಂದರ ಮೇಲೆ ಕುಳಿತು ಕಾದೆವು. ಅರ್ಧ ತಾಸು ಕಳೆದರೂ ಮೋಹಿತ ಬರಲಿಲ್ಲ. ಫೋನು ಮಾಡಿದ್ರೂ ಸರಿಯಾಗಿ ಸಂಪರ್ಕ ಸಿಗಲಿಲ್ಲ. ಅಲ್ಲಿ ನೆಟ್‌ವರ್ಕ್ ಕೊಂಚ ದುರ್ಬಲ. ಮತ್ತೆ ತುಸು ಕಾದು, ನಾವು ವಾಪಸ್ ನಡೆದೆವು. ಮನೆಗೆ ಬೀಗ ಹಾಕಿದಂತೆಯೇ ಇತ್ತು. ಮನೆಯ ಸುತ್ತಮುತ್ತ ಹುಡುಕಾಡಿದೆವು. ಎಲ್ಲೂ ಆತನ ಸುಳಿವಿಲ್ಲ. ನಂತ್ರ ಬೀಗ ತೆಗೆದು, ಮನೆಯೊಳಗೆ ತಲಾಶು ಮಾಡಿದೆವು..."

"ಒಂದು ನಿಮಿಷ, ಸೋಮಯ್ಯನೋರೆ. ಕೀ ಯಾರ ಬಳಿ ಇತ್ತು? ಮನೆಗೆ ಬೀಗ ಹಾಕಿದ್ದು ಯಾರು?"

"ಬೀಗ ಹಾಕಿದ್ದು ಮೋಹಿತ್. ಆದ್ರೆ ವರ್ಷಿಣಿಯ ಹತ್ರ ಇನ್ನೊಂದು ಕೀ ಇತ್ತು..."

"ವಿಚಿತ್ರವಾಗಿದೆ! ಆಕೆ ಇನ್ನೊಂದು ಕೀ ಯಾಕೆ ಇಟ್ಟುಕೊಂಡಿದ್ದಳು? ಇರಲಿ, ಮುಂದುವರೆಸಿ."

"ನಾವು ಸುಮಾರು ಮುಕ್ಕಾಲು ತಾಸು ಸುತ್ತಮುತ್ತಲಿನ ಪ್ರದೇಶವೆಲ್ಲಾ ಜಾಲಾಡಿದೆವು. ಆತನ ಮನೆಯ ಪಶ್ಚಿಮದ ಭಾಗದಲ್ಲಿ ಆಳವಾದ ಪ್ರಪಾತ. ದಕ್ಷಿಣ ದಿಕ್ಕಿನಲ್ಲಿ ದಟ್ಟವಾದ ಕಾಡು. ಹತ್ತಿರದಲ್ಲೆಲ್ಲೂ ಆತ ಕಾಣಲಿಲ್ಲ. ಕಾಡಿನೊಳಕ್ಕೆ ನಾವು ಹೋಗ್ಲಿಲ್ಲ. ಪೊಲೀಸರಿಗೆ ದೂರು ಕೊಡೋಣ ಅಂತ ನಾನು ಹೇಳ್ದೆ. ಅದಕ್ಕೆ ವರ್ಷಿಣಿ ಗಡಿಬಿಡಿ ಮಾಡೋದು ಬೇಡ, ಕೆಲವೊಮ್ಮೆ ಮೋಹಿತ್ ಹಾಗೆ ಹಠಾತ್ತಾಗಿ ಮಾಯವಾಗೋದುಂಟು, ಒಮ್ಮೊಮ್ಮೆ ಪಕ್ಕದ ಕಾಡಿನೊಳಕ್ಕೆ ಹೋಗಿ, ಕೆಲವು ದಿನಗಳು ಬರೋದೇ ಇಲ್ಲ, ಅದು ಮಾಮೂಲು. ಹಿಂದೆಲ್ಲಾ ಹೇಳಿ ಹೋಗ್ತಿದ್ದ, ಈ ಸಲ ಹೇಳದೇ ಹೋಗಿದ್ದಾನೆ ಅಷ್ಟೇ ಅಂತಂದಳು. ನಾನೂ ಸುಮ್ಮನಾದೆ."

"ಹಾಗಿದ್ರೆ ನೀವು ಪೊಲೀಸಿಗೆ ದೂರು ಕೊಡಲಿಲ್ವೆ?"

ನಾನು ಮಧ್ಯೆ ಪ್ರಶ್ನಿಸಿದೆ.